


**ಎಡದಿಂದ ಬಲಕ್ಕೆ**

1. ಹನುಮನ ಸಾಹಸಗಳ ಬಗೆಗೂ ಇದೆಂಥ ಸಂಶಯ! 4
3. ಹರಿವಾಣದಲ್ಲಿ ಇಟ್ಟಿದ್ದ ಎಲ್ಲ ಒಡವೆಗಳ ಕಳುವು 3
4. ಮಡಿಕೆಯಲ್ಲಿ ಹಣ ತುಂಬಿಸಿ ಇಟ್ಟಿದ್ದು ಪೂರ್ವ ದಿಕ್ಕು ತಾನೇ? 3
6. ಹಿತಕರ ಕಂಪಿನಿಂದ ಸೆಳೆಯಲ್ಪಟ್ಟು ಧಾಳಿ ಮಾಡಿದ್ದು ಮಂಗಗಳ ಸೈನ್ಯ! 4
7. ಆರತಿ ಎತ್ತುವ ಕೆಲಸಕ್ಕೆ ಏಕಿಷ್ಟು ತರಾತುರಿ? 3
9. ಅಚ್ಯುತ ರಾಯರದು ಇದೆಂಥ ಅಚ್ಚರಿಯ ನಡವಳಿಕೆ! 3
11. ತೋರಿಕೆಗಷ್ಟೇ ಆತನೊಬ್ಬ ಅಲೆಮಾರಿ 3
13. ಶೂರನೇ ಆಗಲೀ, ಅರಸನೇ ಆಗಿರಲಿ, ನಾಲಿಗೆ ಮಾತ್ರ ಒಂದೇ 3
15. ಪೆಟ್ಟಿಗೆಗಳನ್ನು ಒಟ್ಟಾಗಿ ಸಾಗಿಸಬಹುದಾದಂಥ ಮೆಟ್ಟಿಲು 4
17. ಯಾವ ಸೀಮೆಯಿಂದ ಬಂದದ್ದು ಈ ಮಂಗ? 3
18. ಬಂದಿ ಏರಿಸಿ ಕರೆದು ತಂದವರಿಗೆಲ್ಲ ಊಟಕ್ಕೆ ನೀಡಿ 3
19. ಹೊಸ ಹೆಸರು ನೀಡಿದವರ ಸಂಖ್ಯೆ ಸಾವಿರಾರು 4

**ಮೇಲಿಂದ ಕೆಳಕ್ಕೆ**

1. ಅಕ್ಕನಂತೆಯೇ ಕಾಣುವ ಈ ಅನುಕರಣೆ ಕುಚೋದ್ಯವಾದೀತು 3
2. ಈ ಮನೆಯ ವಿನ್ಯಾಸದ್ದೇ ತುಂಬ ಬೇರೆ ತರಹ 3
3. ಹಳ್ಳ ತೆಗೆದು ಹುದುಗಿಸಿಡುವ ಈ ಕ್ರಮದಲ್ಲಿ ಹೊಸತನ ಏನೂ ಇಲ್ಲ 3
5. ಚೂರ್ಣ ಸೇವಿಸಿ ಪಾದವನ್ನೇ ಎಳೆದ ನಡೆದಾಟ ಬುಡಮೇಲು! 3
7. ಹಣತೆಗಳನ್ನು ಹಚ್ಚಲೇಬೇಕೆಂಬುದು ಆಕೆಯ ಅಣ್ಣನದೇ ಆಜ್ಞೆ 3
8. ಕೆಲಸಕ್ಕೆ ರಾಜೀನಾಮೆ ಕೊಡಲು ಮುಂದಾದ ಆ ಅಗಸ 3
9. ಅಧ್ಯಯನ ನಿರತರನ್ನು ಕಂಡರೆ ಅಲ್ಲಿ ಭಾರೀ ಗೌರವ 3
10. ಹೊಸ ವಿಚಾರಗಳನ್ನೆಲ್ಲ ಬಿಂಬಿಸುವ ಒಂದು ಅದ್ಭುತ ನಿರ್ಮಿತಿ ಇದು 3
12. ಇಂಥ ಸಾಮಾನು ಸರಂಜಾಮು ಸಾಗಿಸಲೂ ಅದೆಂಥ ಶುಲ್ಕ? 3
14. ಸಾವಿರಾರು ಸಸಿಗಳಿಗೆ ನೀರನ್ನು ಒದಗಿಸಬಲ್ಲ ಸರೋವರ ಇದು 3
15. ಪ್ರೇಯಸಿಯನ್ನು ಮೆಚ್ಚಿಸಲು ತಯಾರಿಸಿದ ಬೆಲ್ಲದ ಪೇಯ ಗೊತ್ತೇ? 3
16. ಗಾಂಭೀರ್ಯದ ಎಲ್ಲೆ ಮೀರಿದರೆ ಚೆನ್ನಾಗಿ ಪರಚು 3

---

**07—10—2021 ಉತ್ತರಗಳು**

**ಎಡದಿಂದ ಬಲಕ್ಕೆ**

1. ಅಭ್ಯಂತರ 3. ವಾರಿಧಿ 4. ಕ್ಷಾಲನ 6. ದಳಪತಿ 7. ಲಕ್ಷಾಂತರ 9. ಯಜಮಾನ 12. ಹಸ್ತಾಂತರ ಲವಿಗಾ (ಗಾವಿಲ ಹಿಂದುಮುಂದು)15. ಮಾರ್ಜಾಲ 16. ರಹದಾರಿ

**ಮೇಲಿಂದ ಕೆಳಕ್ಕೆ**

1. ಅಧಿಪತಿ 2. ರಕ್ಷಾಬಲ 3. ವಾಚಾಳ 5. ನಲ್ಲೀತ (ತಲ್ಲೀನ ತಲೆಕೆಳಗು) 6. ದಯನೀಯ 8. ರಕ್ತಾಂಬರ 10. ಜಟಿಲ 11. ನಗೆಗಾರ12. ಹಟಮಾರಿ 13. ತಬಲ

ಪ್ರಶ್ನಾಂಕಣ

# ದಕ್ಷಿಣ ಸಾಗರ: ಏನು ವಿಶೇಷ?

ಪೃಥ್ವಿಯ ಮೇಲ್ಮೈನ ಶೇ. 71ರಷ್ಟು ವಿಸ್ತಾರವನ್ನು ಅವಿಚ್ಛಿನ್ನವಾಗಿ ಆವರಿಸಿರುವ ಇಡೀ ಸಾಗರಾವಾರವನ್ನು ಭೌಗೋಳಿಕವಾಗಿ ಪಂಚ ಮಹಾ ಸಾಗರಗಳನ್ನಾಗಿ ವಿಂಗಡಿಸಲಾಗಿದೆ, ಹೌದಲ್ಲ? ಪೆಸಿಫಿಕ್ ಮಹಾಸಾಗರ, ಅಟ್ಲಾಂಟಿಕ್ ಮಹಾಸಾಗರ, ಹಿಂದೂ ಮಹಾಸಾಗರ, ಆರ್ಕ್ಟಿಕ್ ಮಹಾಸಾಗರ ಮತ್ತು ದಕ್ಷಿಣ ಮಹಾಸಾಗರಗಳೆಂಬ ಈ ಐದು ಮಹಾಸಾಗರಗಳಲ್ಲಿ ಭೂ ತಳದ ಶಾಶ್ವತ ಹಿಮಲೋಕವಾದ ಅಂಟಾರ್ಕ್ಟಿಕಾ ಭೂ ಖಂಡವನ್ನು (ಚಿತ್ರ2) ಪರಿವರಿಸಿರುವ ಪಾರಾವಾರವೇ (ಚಿತ್ರ1) ದಕ್ಷಿಣ ಸಾಗರ. ದಕ್ಷಿಣ ಧ್ರುವದಿಂದ ಸಮಭಾಜಕದ ಕಡೆಗೆ 60 ಡಿಗ್ರಿ ದಕ್ಷಿಣ ಅಕ್ಷಾಂಶದವರೆಗೂ ಹರಡಿರುವ ಈ ಮಹಾ ಸಾಗರಕ್ಕೆ 'ಅಂಟಾರ್ಕ್ಟಿಕ್ ಮಹಾಸಾಗರ' ಎಂಬ ಹೆಸರು ಕೂಡ ಇದೆ. ದಕ್ಷಿಣ ಸಾಗರದ ವಿಭಿನ್ನ, ವಿಶಿಷ್ಟ, ವಿಸ್ಮಯಕರ ಲಕ್ಷಣಗಳು ಹಲವಾರು. ಪ್ರಮುಖವಾಗಿ—

- ಪ್ರತಿಯೊಂದು ಮಹಾಸಾಗರವೂ ಭೂ ಖಂಡಗಳ ಅಂಚುಗಳಿಂದ ಪರಿವರಿಸಲ್ಪಟ್ಟಿವೆ. ಆದರೆ ದಕ್ಷಿಣ ಮಹಾಸಾಗರ ಮಾತ್ರ ಒಂದು ಭೂ ಖಂಡವನ್ನೇ ಪರಿವರಿಸಿದೆ (ಚಿತ್ರ1).
- ಎಲ್ಲ ಮಹಾಸಾಗರಗಳ ಗಡಿಗಳು ಅವನ್ನು ಪರಿವರಿಸಿರುವ ಭೂ ಖಂಡಗಳ ಅಂಚುಗಳಿಂದ ನಿರ್ಧರಿಸಲ್ಪಟ್ಟಿವೆ. ಆದರೆ ದಕ್ಷಿಣ ಮಹಾಸಾಗರದ ಗಡಿಯನ್ನು ಮಾತ್ರ 'ಸಾಗರ ಪ್ರವಾಹ'ವೊಂದು (ಓಷನ್ ಕರೆಂಟ್) ನಿರ್ಧರಿಸಿದೆ. ಅಂಟಾರ್ಕ್ಟಿಕಾ ಭೂ ಖಂಡದ ಸುತ್ತ ಕಡಲ ಜಲದ ಪರಿಭ್ರಮಣಕ್ಕೆ ಕಾರಣವಾಗಿರುವ ಪ್ರಬಲ ಸಾಗರ ಪ್ರವಾಹ 'ಅಂಟಾರ್ಕ್ಟಿಕ್ ಸರ್ಕಂ ಪೋಲಾರ್ ಕರೆಂಟ್'ನ ಹಾದಿಯೇ ದಕ್ಷಿಣ ಸಾಗರದ ಅಂಚು. ಉಳಿದೆಲ್ಲ ಸಾಗರಗಳಿಂದ ನೀರನ್ನು ಸೆಳೆಯುತ್ತ, ಇತರ ಎಲ್ಲ ಸಾಗರ ಪ್ರವಾಹಗಳಿಗಿಂತ ಹೆಚ್ಚು ನೀರನ್ನು ಹರಿಸುತ್ತ ಅಂಟಾರ್ಕ್ಟಿಕ್ ಸರ್ಕಂ ಪೋಲಾರ್ ಕರೆಂಟ್ ಧರೆಯ ಇಡೀ ಕಡಲಿನಾವಾರಕ್ಕೇ ಅಷ್ಟೂ ಜಲರಾಶಿಯನ್ನು ಸಂವಹನಗೊಳಿಸುತ್ತಿದೆ.
- ಧರೆಯ ಐದೂ ಮಹಾಸಾಗರಗಳಲ್ಲಿ ದಕ್ಷಿಣ ಮಹಾಸಾಗರದ್ದೇ ಅತ್ಯಂತ ಕಡಿಮೆ ಲವಣಾಂಶ; ಪ್ಲಾಸ್ಟಿಕ್ ಕಸ ಮತ್ತಿತರ ಹಾನಿಕರ ಮಾಲಿನ್ಯಗಳೂ ಅತ್ಯಂತ ಕಡಿಮೆ ಪ್ರಮಾಣದಲ್ಲಿರುವ ಕಾರಣದಿಂದ 'ಅತ್ಯಂತ ಸ್ವಚ್ಛ ಮಹಾಸಾಗರ' ಎಂಬ ವಿಶ್ವ ದಾಖಲೆಯನ್ನೂ ಇದೇ ಅಂಟಾರ್ಕ್ಟಿಕ್ ಮಹಾಸಾಗರವೇ ಸೃಜಿಸಿದೆ. ಈ ಕಡಲಿನಲ್ಲಿ ತೇಲುವ ಬೃಹದಾಕಾರದ ಹೇರಳ 'ಐಸ್ ಬರ್ಗ್'ಗಳು ಹಸಿರು, ನೀಲಿ ಇತ್ಯಾದಿ ವರ್ಣಗಳನ್ನು ತಳೆದಿರುತ್ತವೆ; ವರ್ಣಮಯ ಪಟ್ಟೆ ಚಿತ್ತಾರಗಳನ್ನು ಪಡೆದಿರುತ್ತವೆ (ಚಿತ್ರ 4).
- ದಕ್ಷಿಣ ಮಹಾಸಾಗರ ಅಂಟಾರ್ಕ್ಟಿಕಾ ಭೂ ಖಂಡದಂತೆಯೇ ತುಂಬ ವಿಶಿಷ್ಟ ಜೀವಾವಾರ ಕೂಡ. ಇಲ್ಲಿನ ಕುಬ್ಜ ಗಾತ್ರದ, ಬಿಲಿಯಾಂತರ ಸಂಖ್ಯೆಯ 'ಕ್ರಿಲ್' ಗಳೇ ಬಲೀನ್ ತಿಮಿಂಗಿಲಗಳ ಪ್ರಮುಖ ಆಹಾರ ಮೂಲ. ಪೆಂಗ್ವಿನ್ (ಚಿತ್ರ 3) ಮತ್ತಿತರ ಹಲವಾರು ಸಾಗರ ಪಕ್ಷಿಗಳು ಮತ್ತು ಪ್ರಾಣಿಗಳು ಆಹಾರಕ್ಕಾಗಿ ಇದೆ ಕಡಲನ್ನೇ ಆಶ್ರಯಿಸಿವೆ.




■ ಎನ್. ವಾಸುದೇವ್